ಕಂದಾಯ ಇಲಾಖೆ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ.ಪಹಣಿ/ವಿವಾದ/14/2015-16 ದಿನಾಂಕ:

ವಾದಿಗಳು ಪ್ರತಿವಾದಿಗಳು

1.ಶ್ರೀಮತಿ ಎಂ ಲಕ್ಷ್ಮವ್ವ 1.ಶ್ರೀ ಈಶ್ವರಪ್ಪ

ವಾದಗ್ರಸ್ತ ಜಮೀನಿನ ವಿವರ

| ಕ್ರಮ ಸಂಖ್ಯೆ | ಸರ್ವೇ ನಂಬರ | ವಿಸ್ತೀರ್ಣ | ಗ್ರಾಮದ ಹೆಸರು |
|---|---|---|---|
| 1 | 282ಎ | 6.61 | ಬೀರಬ್ಬಿ |

ಪೀಠಿಕೆ,

ಹಡಗಲಿ ತಾಲೂಕಿನ ಬೀರಬ್ಬಿ ಗ್ರಾಮದ ಸರ್ವೆ ನಂ 282ಎ , ವಿಸ್ತೀರ್ಣ 6.61 ಎಕರೆ ಜಮೀನನ್ನು ನೊಂದಾಯಿತ ದಾನ ಪತ್ರದ ದಸ್ತಾವೇಜು ಸಂಖ್ಯೆ 2118/2014.15 ದಿನಾಂಕ:09.10.2014 ಮೇರೆಗೆ ಮಾಗಳದ ವಿದ್ಯಾಸಾಗರ ಇವರು ತಮ್ಮ ಪತ್ನಿಯಾದ ಶ್ರೀಮತಿ ಮಾಗಳ ಲಕ್ಷ್ಮವ್ವ ಇವರಿಗೆ ಬರೆದು ಕೊಟ್ಟ ಕಾರಣ , ಹಕ್ಕು ಬದಾಲವಣೆ ಸಂಖ್ಯೆ ಹೆಚ್ 26/2014-15 ರಲ್ಲಿ ನೊಂದಾಯಿಸಿಕೊಂಡು ಹಿತಾಸಕ್ತರಿಗೆ ನಮೂನೆ 21 ರಲ್ಲಿ ನೋಟೀಸ್ ಜಾರಿ ಮಾಡಲು ಕ್ರಮ ಜರುಗಿಸಿದಾಗ .ಶ್ರೀ ಈಶ್ವರಪ್ಪ ಇವರು ನಿಗಧಿತ ಅವದಿಯಲ್ಲಿ ತಕರಾರು ಸಲ್ಲಿಸಿದ ಮೇರಿಗೆ ಕಂದಾಯ ನಿರೀಕ್ಷಕರು, ಹಿರೇಹಡಗಲಿ ಇವರು ಪ್ರಕರಣವನ್ನು ವಿವಾದಾಸ್ಪದ ವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 129ರಡಿಯಲ್ಲಿ ವಿಚಾರಣೆಗೆ ತೆಗೆದುಕೊಂಡು ವಾದಿ ಪ್ರತಿವಾದಿಗಳಿಗೆ ನೋಟೀಸು ನೀಡಿ ವಿಚಾರಣೆಯನ್ನು ದಿನಾಂಕ: 15.12.2014 ರಂದು ಪ್ರಾರಂಬಿಸಿ ದಿನಾಂಕ: 16.07.2016 ಕ್ಕೆ ಮುಕ್ತಾಯ ಗೋಳಿಸಲಾಯಿತು.

ವಾದಿ ಮತ್ತು ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ ವಾದಿಯ ಪರವಾಗಿ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ ಪ್ರತಿವಾದಿಪರ ವಕೀಲರು ದಿನಾಂಕ: 15.02.2015ರಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಇ.ಸಿ ಮತ್ತು ನೊಂದಾಯಿತ ದಸ್ತವೇಜುಗಳನ್ನು ಸಲ್ಲಿಸಿ ವಾದಿಯ ಗಂಡನಾದ ಮಾಗಳ ವಿದ್ಯಾ ಸಾಗರ ಇವರು 03.04.1969ರಂದು ಶ್ರೀ ಕೊಟ್ರಪ್ಪ ತಂದೆ ಸಂಗಪ್ಪ ಇವರಿಗೆ ಮಾರಾಟ ಮಾಡಿದ್ದು ತದನಂತರ ಕೊಟ್ರಪ್ಪ ಇವರು 08.05.1969 ರಂದು ಶ್ರೀಚಿತ್ರಕಿ ಶಂಕ್ರಪ್ಪ ಇವರಿಗೆ ಮಾರಾಟ ಮಾಡಿದ ಬಗ್ಗೆ ಸಾಬೀತು ಪಡಿಸಿ ವಾದಿ ಪರವಾಗಿ ಹಕ್ಕು ಬದಲಾವಣೆ ಮಾಡಬಾರದೆಂದು ಕೊರಿರುತ್ತಾರೆ. ಕಾರಣ ಈ ಕೆಳಕಂಡ

:-ಆದೇಶ-:

ಪ್ರಕರಣದ ವಾಸ್ತವಾಂಶ, ಹಿನ್ನೆಲೆ ಹಾಗೂ ದಾಖಲೆಗಳ ಮೇರೆಗೆ ಪ್ರತಿವಾದಿಯು ಸಲ್ಲಿಸಿದ ದಾಖಲೆಗಳನ್ವಯ ವಾದಿಯ ಪತಿ ಶ್ರೀ ಮಾಗಳ ವಿದ್ಯಸಾಗರ ಇವರು 03.04.1969ರಂದು ಶ್ರೀ ಕೊಟ್ರಪ್ಪ ತಂದೆ ಸಂಗಪ್ಪ ಇವರಿಗೆ ಮಾರಾಟ ಮಾಡಿದ್ದು ತದನಂತರ ಕೊಟ್ರಪ್ಪ ಇವರು 08.05.1969 ರಂದು ಶ್ರೀ ಚಿತ್ರಕಿ ಶಂಕ್ರಪ್ಪ ಇವರಿಗೆ ಮಾರಾಟ ಮಾಡಿದ ಬಗ್ಗೆ ಇ.ಸಿ ಪ್ರಕಾರ ಸಾಬೀತಾಗಿರುವುದರಿಂದ ಬೀರಬ್ಬಿ ಗ್ರಾಮದ ಸರ್ವೆ ನಂ 282ಎ , ವಿಸ್ತೀರ್ಣ 6.61 ಎಕರೆ ಜಮೀನಿಗೆ ಸಂಬಂದಿಸಿದಂತೆ ವಾದಿ ಮತ್ತು ಪ್ರತಿವಾದಿಗಳು ಸೂಕ್ತ ಸಿವಿಲ್ ನ್ಯಾಯಲಯದಲ್ಲಿ ಪರಿಹಾರ ಕಂಡುಕೊಳ್ಳಲು ನಿರ್ದೇಶಿಸಿ ಪ್ರಕರಣವನ್ನು ವಿಲೇ ಗೊಳಿಸಲಾಗಿದೆ.

ಈ ಆದೇಶವನ್ನು ದಿನಾಂಕ: 07.2016 ರಂದು ತೆರದ ನ್ಯಾಯಲಯದ್ಲಿ ಘೋಶಿಸಲಾಗಿದೆ

ತಹಶೀಲ್ದಾರರು
ಹಡಗಲಿ

ಪ್ರತಿಯನ್ನು:

1. ಶ್ರೀ ಮತಿ ಎಂ ಲಕ್ಷ್ಮವ್ವ
2. .ಶ್ರೀ ಈಶ್ವರಪ್ಪ
3. ಗಣಿಕೀಕರಣ ಕೇಂದ್ರ ತಹಶೀಲ್ದಾರರ ಕಛೇರಿ ಹಡಗಲಿ